ಅ) ಬಿಜಾಪುರ ಜಿಲ್ಲೆಯ ನೋಟರಿಗಳ ಅರ್ಜಿಗಳನ್ನು ರಿನ್ಯೂವಲ್‌ಗಾಗಿ ಕಾಯ್ದಿರಿಸ ಲಾಗಿದೆಯೇ?

ಆ) ಈ ಪ್ರಕರಣಗಳು ಎಷ್ಟು ವರ್ಷಗಳಿಂದ ಬಾಕಿಯಿರುತ್ತವೆ?

ಇ) ಇದನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಒಬ್ಬ ನೋಟರಿಯವರ ಅರ್ಜಿಯನ್ನು ನವೀಕರಣಕ್ಕಾಗಿ ಕಾಯ್ದಿರಿಸಲಾಗಿದೆ.

ಆ) ಶ್ರೀ ಕೆ.ಎನ್. ಇನಾಂದಾರ್, ನೋಟರಿ ಬಿಜಾಪುರ ಇವರ ವೃತ್ತಿ ಪ್ರಮಾಣ ಪತ್ರದ ಅವಧಿಯು ದಿನಾಂಕ : 01.07.2001ಕ್ಕೆ ಮುಗಿದಿದ್ದು ದಿನಾಂಕ : 02.07.2001 ರಿಂದ ನವೀಕರಿಸಲು ಬಾಕಿ ಇರುತ್ತದೆ.

ಇ) ಶ್ರೀಯುತ ಕೆ.ಎನ್. ಇನಾಂದಾರ್, ನೋಟರಿ ಇವರ ಮೇಲೆ ಕೆಲವೊಂದು ದೂರುಗಳಿದ್ದು, ಆ ಕುರಿತಂತೆ ವಿಚಾರಣೆ ನಡೆಸಿ ವರದಿ ಕಳುಹಿಸಿಕೊಡುವಂತೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಿಜಾಪುರ ಇವರನ್ನು ದಿನಾಂಕ : 09.12.1999ರಂದು ಸರ್ಕಾರವು ಆದೇಶ ಹೊರಡಿಸಿ ಕೋರಲಾಗಿತ್ತು. ಆದರೆ ಅವರಿಂದ ಇದುವರೆವಿಗೂ ವಿಚಾರಣಾ ವರದಿ ಬಂದಿರುವುದಿಲ್ಲ.

ಆದಷ್ಟು ಬೇಗ ವಿಚಾರಣಾ ವರದಿ ಸಲ್ಲಿಸಲು ಸರ್ಕಾರ ಪತ್ರ ಬರೆದಿದೆ. ಸರ್ಕಾರಕ್ಕೆ ವರದಿ ಬಂದ ಮೇಲೆ ಕ್ರಮ ಜರುಗಿಸಲಾಗುವುದು.

5434(6262) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಳವಾಡ ಏತ ನೀರಾವರಿಯಲ್ಲಿ ಬಿಜಾಪುರ ಜಿಲ್ಲೆಗೆ ಮೂಲ ಯೋಜನೆಗಳಲ್ಲಿ ಸ್ಕೀಮ್ 'ಎ' ಮತ್ತು 'ಬಿ' ನಲ್ಲಿ ಒದಗಿಸಲಾದ ನೀರಿನ ಮೊತ್ತವೆಷ್ಟು?

ಆ) ಸದರಿ ನೀರನ್ನು ಯಾವ ವರ್ಷದಲ್ಲಿ ನಿಗಧಿಗೊಳಿಸಲಾಗಿತ್ತು; ದಿನಾಂಕ ತಿಳಿಸುವುದು?

ಇ) ಸದರಿ ಯೋಜನೆ ಅಡಿಯಲ್ಲಿ ಎಷ್ಟು ನೀರನ್ನು ಉಪಯೋಗಿಸಲಾಗಿದೆ?

ಈ) ಆಲಮಟ್ಟಿ ಅಣೆಕಟ್ಟನ್ನು ಕಟ್ಟುವಾಗ ಬಿಜಾಪುರ ಜಿಲ್ಲೆ ಹಾಗೂ ಬಾಗಲಕೋಟೆ ಜಿಲ್ಲೆಯ ಅತೀ ಹೆಚ್ಚಿನ ಜಮೀನನ್ನು ಕಳೆದುಕೊಂಡು ಆಲಮಟ್ಟಿ ಅಣೆಕಟ್ಟಿಗೆ ಅನುವು ಮಾಡಿ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸದರಿ ಯೋಜನೆಯಲ್ಲಿ ರಾಯಚೂರು ಜಿಲ್ಲೆ ಮತ್ತು ಗುಲ್ಬರ್ಗಾ ಜಿಲ್ಲೆಯ ಮುಳಗಡೆಯಾಗಿರುವ ಜಮೀನು ಎಷ್ಟು?

ಉ) ಸದರಿ ಮುಳವಾಡ ಯೋಜನೆಯಲ್ಲಿ ಸ್ಕೀಂ 'ಬಿ' ನಲ್ಲಿ ಒದಗಿಸಲಾಗಿದ್ದ ನೀರನ್ನು ಕಡಿತಗೊಳಿಸಲಾಗಿದೆಯೇ? ಹಾಗಿದ್ದಲ್ಲಿ ಇದು ಬಿಜಾಪುರ ಜಿಲ್ಲೆಗೆ ಅನ್ಯಾಯ ಮಡಿದಂತಾಗಿಲ್ಲವೇ: ಹಾಗಿದ್ದಲ್ಲಿ, ಈ ಅನ್ಯಾಯವನ್ನು ಸರಿಪಡಿಸಲು ಸರ್ಕಾರದ ಕ್ರಮವೇನು? (ತಿಳಿಸುವುದು)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಮುಳವಾಡ ಏತ ನೀರಾವರಿ ಯೋಜನೆಯಿಂದ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಸ್ಕೀಮ್ 'ಎ' ಅಡಿ 8.45 ಟಿ.ಎಂ.ಸಿ ನೀರು ಒದಗಿಸಲಾಗಿದೆ. ಸ್ಕೀಮ್-'ಬಿ' ಗೆ ಸಂಬಂಧಿಸಿದಂತೆ ಕೃಷ್ಣಾ ನ್ಯಾಯಾಧೀಕರಣ ರಚನೆಯಾಗಿದ್ದು, ಕೃಷ್ಣಾ ಕಣಿವೆಯ ಹೆಚ್ಚುವರಿ ನೀರಿನ ಹಂಚಿಕೆ ಕುರಿತು ನ್ಯಾಯಾಧೀಕರಣದ ತೀರ್ಪು ಬಂದ ನಂತರ ನಿರ್ಧರಿಸಬಹುದಾಗಿದೆ.

ಆ) ಸ್ಕೀಮ್–ಎ ಗಾಗಿ 8.45 ಟಿ.ಎಂ.ಸಿ ನೀರನ್ನು ಡಿಸೆಂಬರ್ 2000 ರಲ್ಲಿ ನಿಗದಿಗೊಳಿಸಲಾಗಿದೆ. ಸ್ಕೀಮ್–ಬಿ ಅಡಿ ನೀರಿನ ಹಂಚಿಕೆ ಕೃಷ್ಣಾ ನ್ಯಾಯಾಧೀಕರಣದ ಅಂತಿಮ ತೀರ್ಪಿನ ನಂತರ ನಿಗದಿಗೊಳಿಸಲಾಗುವುದು.

ಇ) ಮುಳುವಾಡ ಏತ ನೀರಾವರಿ ಯೋಜನೆಯ ಸ್ಕೀಂ–ಎ ಅಡಿಯ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುವುದರಿಂದ ನೀರನ್ನು ಕಾಲುವೆಗೆ ಹರಿಬಿಡಲಾಗಿರುವುದಿಲ್ಲ.

ಈ) ಸದರಿ ಯೋಜನೆಯಲ್ಲಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಜಮೀನುಗಳನ್ನು ಕಳೆದುಕೊಂಡಿರುವುದು ನಿಜ. ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಜಮೀನುಗಳು ಮುಳುಗಡೆಯಾಗಿರುವುದಿಲ್ಲ.

ಉ) ಸ್ಕೀಮ್–'ಬಿ' ಗೆ ಸಂಬಂಧಿಸಿದಂತೆ ಕೃಷ್ಣಾ ವಿವಾದ ನ್ಯಾಯಾಧೀಕರಣ ರಚನೆಯಾಗಿದ್ದು, ಕೃಷ್ಣಾ ಕಣಿವೆಯಲ್ಲಿ ಲಭ್ಯವಿರುವ ಹೆಚ್ಚುವರಿ ನೀರಿನ ಹಂಚಿಕೆ ಕುರಿತು ನ್ಯಾಯಾಧೀಕರಣದ ತೀರ್ಪು ಬಂದ ನಂತರ ನಿರ್ಧರಿಸಬಹುದಾಗಿದೆ.

5435(6188) ಶ್ರೀ ಶಿವಶಂಕರ್‌ರೆಡ್ಡಿ ಎನ್. ಹೆಚ್. (ಗೌರಿಬಿದನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದಿನ ಸರ್ಕಾರ ಐದು ವರ್ಷಗಳಲ್ಲಿ ಬೆಂಗಳೂರು ಪಟ್ಟಣವನ್ನು ಸುಂದರಗೊಳಿಸಿ ಸಿಂಗಾಪುರ ಪಟ್ಟಣ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಪ್ರಯತ್ನಪಡಿಸಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ, ಈ ಅಭಿವೃದ್ಧಿ ಹಿತದೃಷ್ಟಿಯಿಂದ ಅನೇಕ ಫ್ಲೈ ಓವರ್ ಪಾರ್ಕ್ ಪುಟಪಾತ್, ಕೆರೆ, ಐ.ಟಿ. ಬಿ.ಟಿ, ಗಾರ್ಡನ್‌ಗಳನ್ನು ಅಭಿವೃದ್ಧಿ ಪಡಿಸಲು ವೆಚ್ಚ ಮಾಡಿದ ಹಣವೆಷ್ಟು ಹಾಗೂ ಐ.ಟಿ.ಬಿ.ಟಿಗೆ ಮೂಲಭೂತ ಸೌಕರ್ಯವನ್ನು ಒದಗಿಸಲು ನೀಡಿದ ಅನುದಾನವೆಷ್ಟು;

ಇ) ಪ್ರಸಕ್ತ ಸರ್ಕಾರ ಬೆಂಗಳೂರು ಪಟ್ಟಣವನ್ನು ಸುಂದರಗೊಳಿಸಲು ಹಾಕಿಕೊಂಡ ಕಾರ್ಯಕ್ರಮವೇನು;

ಈ) ಹಾಗೂ ಇದಕ್ಕೆ ಖರ್ಚು ಮಾಡಲಿರುವ ಅನುದಾನ ಎಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಪ್ರಸ್ತುತ ಅಂತಹ ಯೋಜನೆ ಸರ್ಕಾರದ ಮುಂದಿರುವುದಿಲ್ಲ.

ಆ) ಬೆಂಗಳೂರು ನಗರವನ್ನು ಅಭಿವೃದ್ಧಿಗೊಳಿಸುವ ಹಿನ್ನೆಲೆಯಲ್ಲಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ:–

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ :–

ಮಾಹಿತಿ ತಂತ್ರಜ್ಞಾನ ಕಾರಿಡಾರ್ ಅಭಿವೃದ್ಧಿಪಡಿಸುವ ಸಂಬಂಧ ಮೆ: ಜುರಾಂಗ್ ಕನ್ಸ್‌ಲ್ಟೆಂಟ್ ಪ್ರೈ.ಲಿ. ರವರಿಂದ ರೂ. 1,18,32,588/– ವೆಚ್ಚ ಮಾಡಿ ಯೋಜನೆಯೊಂದನ್ನು ರೂಪಿಸಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 8 ಮೇಲು ಸೇತುವೆಗಳನ್ನು ಪ್ರಾರಂಭಿಸಿ 5 ಮೇಲು ಸೇತುವೆಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕಾಗಿ ತೆರವುಗೊಳಿಸ ಲಾಗಿದೆ. ಉಳಿದ ಮೂರು ಮೇಲು ಸೇತುವೆಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಕೆರೆಗಳಾದ ಬೆನ್ನಿಗಾನಹಳ್ಳಿ, ಅಗರ ಮತ್ತು ಲಾಲ್‌ಬಾಗ್ ಕೆರೆಗಳ ಅಭಿವೃದ್ಧಿ ಹಾಗೂ ಎರಡು ಉದ್ಯಾನವನಗಳಾದ ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕ್ ಅಭಿವೃದ್ಧಿಯನ್ನು ಸಹ ಪ್ರಾಧಿಕಾರವು ಕೈಗೊಂಡಿದೆ. ಈ ಕಾಮಗಾರಿಗಳಿಗೆ ಭರಿಸಿರುವ ವೆಚ್ಚ ರೂ. 183.90 ಕೋಟಿಗಳು.